ಕರ್ನಾಟಕ ವಿಧಾನ ಸಭೆ

ಮಂಗಳವಾರ 10ನೇ ಜುಲೈ 1990

ಸದನವು ವಿಧಾನ ಸೌದದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ 9-00 ಗಂಟೆಗೆ ಸಮಾವೇಶಗೊಂಡಿತು

ಉಪಾಧ್ಯಕ್ಷರು ; (ಶ್ರೀಮತಿ ನಾಗಮ್ಮ ಕೇಶವಮೂರ್ತಿ) ಅವರು ಪೀಠವನ್ನು ಅಲಂಕರಿಸಿದ್ದರು

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು

ಬೆಂಗಳೂರಿನಲ್ಲಿರುವ ಮನೆ ಬಾಡಿಗೆ ನಿಯಂತ್ರಣಾಧಿಕಾರಿಯವರಿಂದ ಮನೆಗಳ ಹಂಚಿಕೆ

೪೯೭ (೧೫೭೯) ಪ್ರೊ॥ ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ). ಮಾನ್ಯ ದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಬೆಂಗಳೂರು ನಗರದಲ್ಲಿ ಮನೆ ಬಾಡಿಗೆ ನಿಯಂತ್ರಣಾಧಿಕಾರಿಗಳಿಂದ ಮನೆಗಳನ್ನು ಹಂಚಿಲ್ಪಟ್ಟ ಕರ್ನಾಟಕ ರಾಜ್ಯದ ಸಚಿವರುಗಳ ಹೆಸರುಗಳು ಯಾವುವು ?

ಆ) ಬೆಂಗಳೂರು ನಗರದಲ್ಲಿ ಮನೆ ಬಾಡಿಗೆ ನಿಯಂತ್ರಣಾಧಿಕಾರಿಗಳಿಂದ ಮನೆಗಳನ್ನು ಹಂಚಿಲ್ಪಟ್ಟ ಕರ್ನಾಟಕ ರಾಜ್ಯದ ಐಎಎಸ್ ಅಧಿಕಾರಿಗಳ ಹೆಸರುಗಳು ಯಾವುವು ?

ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮತ್ತು ಕಾರ್ಮಿಕ ಸಚಿವರು).—

ಅ) ಇಲ್ಲ.

ಆ) [೧] ಶ್ರೀ ಜಿ. ವಿ. ಕೆ. ರಾವ್ ಐ.ಎ.ಎಸ್. ೧೯೮೮ರಲ್ಲಿ ಹಂಚಿಕೆ ಮಾಡಿದೆ.
[೨] ಶ್ರೀ ಸಿ. ಎಸ್. ಕೇದಾರ್ ಐ.ಎ.ಎಸ್. —,,—
[೩] ಶ್ರೀ ಎಂ. ಎನ್. ನಾಗರಾಜ್ ಐ.ಎ.ಎಸ್. —,,—

ಆದರೆ ಇವರು ಈ ಮನೆಯ ಸ್ವಾಧೀನ ಹೊಂದಿರುವುದಿಲ್ಲ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಉಪಾಧ್ಯಕ್ಷಣಿಯವರೇ, ಬೆಂಗಳೂರಿನ ಹೌಸ್ ರೆಂಟ್ ಕಂಟ್ರೋಲ್‌ಗಳಿಂದ ನಮ್ಮ ರಾಜ್ಯದ ಮಂತ್ರಿಗಳಿಗೆ ಅಥವಾ ಐಎಎಸ್ ಅಧಿಕಾರಿಗಳಿಗೆ, ಯಾರ್‍ಯಾರಿಗೆ ಮನೆಗಳನ್ನು ಕೊಟ್ಟಿದ್ದಾರೆ ಎನ್ನುವ ಬಗ್ಗೆ ಪ್ರಶ್ನೆಗೆ ಉತ್ತರ ಬಂದಿದೆ. ಸಾಮಾನ್ಯ ಜನರಿಗೂ ಗೊತ್ತಿರುವಂತೆ ವಿಷಯಗಳನ್ನು ನೋಡಿದರೆ ಸನ್ಮಾನ್ಯ ಮಂತ್ರಿಗಳು ಕೊಟ್ಟಿರುವಂತಹ ಉತ್ತರ ನಂಬುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ಕೊಟ್ಟಿರುವ ಹೆಸರಿನಲ್ಲಿ ಸ್ವಂತ ಮನೆ ಇದ್ದೂ ಕೂಡ ಬಾಡಿಗೆ ನಿಯಂತ್ರಣಾಧಿಕಾರಿಯಿಂದ ಮನೆಗಳನ್ನು ತೆಗೆದುಕೊಂಡಿರುವುದು ಕೇವಲ ಮಂತ್ರಿಗಳಷ್ಟೇ ಅಲ್ಲ, ಉನ್ನತ ಅಧಿಕಾರಿಗಳೂ ಈ ಕೆಲಸ ಮಾಡುತ್ತಿದ್ದಾರೆ. ಇನ್ನೂ ಜಾಸ್ತಿನದ ಕೆಲಸ ಆಗುತ್ತಿದೆ. ಈ ಪ್ರಶ್ನೆಯನ್ನೇ ಏತಕ್ಕೆ ಕೇಳುತ್ತಿದ್ದೇನೆ ಅಂದರೆ, ಬಹಳ ಮುಖ್ಯವಾದ ಪ್ರಶ್ನೆ, ಕಣ್ಣೆದುರಿಗೇ ಹಗಲು ಹೊತ್ತು ನಡೆಯುತ್ತಿರುವ ವಂಚನೆ. ನಾನು ಏತಕ್ಕೆ ಮಂತ್ರಿಗಳ ಮತ್ತು ಐಎಎಸ್ ಅಧಿಕಾರಿಗಳ ಬಗ್ಗೆ ಕೇಳಿದೆ ಅಂದರೆ, ಇವರು ತಮ್ಮ ಆತ್ಮಾವಲೋಕನ ಮಾಡಿಕೊಂಡು ಇಂತಹ ಕೆಟ್ಟ ನಡವಳಿಕೆಗಳನ್ನು

ಕೈಬಿಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ನನಗೆ ಗೊತ್ತಿರುವ ಮಾಹಿತಿ ಪ್ರಕಾರ ಜವಾಬ್ದಾರಿ ಸ್ಥಾನದಲ್ಲಿರುವವರು ತಮ್ಮ ಮನೆಗಳನ್ನು ತಮ್ಮ ಹೆಂಡತಿಯ ಹೆಸರಿನಲ್ಲಿ ಇದೆ ಎಂದು ಹೇಳಿ ಸರ್ಕಾರದಿಂದ ಬಾಡಿಗೆ ತೆಗೆದುಕೊಳ್ಳುವಂತಹ ನಿದರ್ಶನಗಳೂ ಇವೆ. ನನಗೆ ಹೆಸರು ಹೇಳುವುದಕ್ಕೆ ಇಷ್ಟ ಇಲ್ಲ. ಏಕೆಂದರೆ ಎಲ್ಲರೂ ಸಮಾರಾಗಿ ನನ್ನ ಹಳೆಯ ಗೆಳೆಯರು, ಆದ್ದರಿಂದ ಇದನ್ನು ತಾವು ತನಿಖೆ ಮಾಡುತ್ತೀರಾ ಎಂದು ಕೇಳುತ್ತಿದ್ದೇನೆ.

ಶ್ರೀ ಕೆ ಹೆಚ್. ಪಾಟೀಲ್.—ಸನ್ಮಾನ್ಯ ಸದಸ್ಯರ ಮನಸ್ಸಿನ ವೇದನೆ ಅರ್ಥ ನನಗೆ ಆಗಿದೆ. ಮಂತ್ರಿಗಳಾಗಿ ನಾವು ಯಾವ ಮನೆಗಳನ್ನೂ ಸಹ ಕೊಟ್ಟಿರುವುದು ದಾಖಲೆಯಲ್ಲಿ ಇಲ್ಲ. ಮಂತ್ರಿಗಳು ಖಾಸಗಿಯಾಗಿ ಮನೆಗಳನ್ನು ತೆಗೆದುಕೊಂಡಿದ್ದರೆ ನಮ್ಮ ನಜರಿಗೆ ಬರುವುದಿಲ್ಲ. ಏಕೆಂದರೆ ಸರ್ಕಾರದಿಂದ ಆದೇಶವನ್ನು ಕೊಟ್ಟು ಮಂತ್ರಿಗಳಿಗೆ ಮನೆಯನ್ನು ಅಲಾಟ್ ಮಾಡಿರುವುದು ಯಾವ ಮಂತ್ರಿಗಳೂ ಮಾಡಿಲ್ಲ. ಇನ್ನು ಐ ಎ ಎಸ್ ಅಧಿಕಾರಿಗಳಿಗೆ ಮೂರು ಜನರಿಗೆ ಮಾಡಿದ್ದೇವೆ. ಆದರಲ್ಲಿ ಇಬ್ಬರು ಮಾತ್ರ ಮನೆಗಳನ್ನು ತೆಗೆದುಕೊಂಡಿದ್ದಾರೆ. ಒಬ್ಬರೂ ಇನ್ನೂ ತೆಗೆದುಕೊಂಡಿಲ್ಲ. ಮಾನ್ಯ ಸದಸ್ಯರು ಕೆಲವು ಜನರು ಬೇರೆ ಬೇರೆ ಹೆಸರಿನಲ್ಲಿ ಮನೆಗಳನ್ನು ಹೊಂದಿದ್ದಾರೆ ಎಂದು ಹೇಳಿದ್ದಾರೆ. ಈಗ ಘಟನಾತ್ಮಕವಾಗಿ ಅವರಿಗೆ ಹಕ್ಕುಗಳನ್ನು ನಾವು ಮೊಟಕು ಮಾಡುವುದಕ್ಕೆ ಬರುವುದಿಲ್ಲ. ಆದರೆ ಸರ್ಕಾರದ ರೀತಿಯಿಂದ ಯಾವುದಾದರೂ ಪಂಚನೆ ಆಗಿದ್ದರೆ, ಅದನ್ನು ನನ್ನ ಗಮನಕ್ಕೆ ತಂದುಕೊಟ್ಟರೆ ನಾನು ನಿಜವಾಗಿ ಪರಿಶೀಲನೆ ಮಾಡುತ್ತೇನೆ. ಹೆಂಡತಿ ಹೆಸರಿನಲ್ಲಿ ಮನೆ ಇರಬಾರದು ಎಂದು ನಾವು ಹೇಳಲಿಕ್ಕೆ ಬರುವುದಿಲ್ಲ. ಹೆಂಡತಿಯ ಹೆಸರಿನಲ್ಲಿ ಮನೆ ಇರಲಿಕ್ಕೆ ಅಧಿಕಾರ ಇದೆ. ಗಂಡನ ಹೆಸರಿನಲ್ಲಿ ಮನೆ ಇರಲಿಕ್ಕೆ ಅಧಿಕಾರ ಇದೆ. ಆದರೆ ಸರ್ಕಾರಕ್ಕೆ ಇದರಿಂದ ಏನಾದರೂ ವಂಚನೆ ಆಗಿದ್ದರೆ ಮಾನ್ಯ ಸದಸ್ಯನ ಮನೋಗತವನ್ನು ಅರ್ಥ ಮಾಡಿಕೊಂಡ. ಆ ಬಗ್ಗೆ ಯೋಗ್ಯವಾದ ತನಿಖೆಯನ್ನು ಮಾಡೋಣ. ಎರಡನೆಯದಾಗಿ ಐಎಎಸ್ ಅಧಿಕಾರಿಗಳು ಮತ್ತು ಮಂತ್ರಿಗಳು ಮನೆಗಳನ್ನು ತೆಗೆದುಕೊಳ್ಳುತ್ತಾರೆಂದು ಹೇಳಿದ್ದಾರೆ. ಒಂದು ವೇಳೆ ಮಂತ್ರಿಗಳಿಗೆ ಸರಿಯಾದ ಮನೆ ಸಿಗದೆ ಇದ್ದರೆ ಅವರು ಬೇಡಿದರೂ ಸಹ ಅಲಾಟ್ ಮಾಡಲಿಕ್ಕೆ ತಪ್ಪು ಏನು ಇದೆ, ಎಂಎಲ್‌ಎಗಳಿಗೆ ಅಲಾಟ್ ಮಾಡಿದರೆ ತಪ್ಪು ಏನು ಇದೆ ? ಈ ದೃಷ್ಟಿಯಿಂದ ಮಂತ್ರಿಗಳ ದರೂ ಸಹ ಅವರೂ ಮನುಷ್ಯ ವರ್ಗದವರೇ. ಎಂಬುದು ನಮ್ಮ ಗಮನದಲ್ಲಿರಬೆಕು. ಎಲ್ಲಿ ಸರ್ಕಾರಿ ಮನೆಗಳು ಸಿಗುತ್ತವೆ ಅಲ್ಲಿ ಮಾತ್ರ ರೆಂಟ್ ಕಂಟ್ರೋಲ್‌ನಿಂದ ಮನೆ ತೆಗೆದುಕೊಂಡು ಉಳಿದ ಜನರಿಗೆ ಅನ್ಯಾಯ ಆಗಬಾರದು ಎನ್ನುವ ಮಾತನ್ನು ನಾನು ಒಪ್ಪುತ್ತೇನೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ.—ನಾನು ಪ್ರಶ್ನೆ ಕೇಳಿರುವ ಮೂಲ ಉದ್ದೇಶ ಇಷ್ಟೆ, ಬೆಂಗಳೂರಿನಲ್ಲಿ ಸ್ವಂತ ಮನೆ ಇಟ್ಟುಕೊಂಡು ಕ ಡಹೌಸ್ ರೆಂಟ್ ಕಂಟ್ರೋಲರವರಿಂದ ಮನೆ ಅಲಾಟ್ ಮಾಡಿಸಿಕೊಳ್ಳುವ ಇಂತಹ ಕೆಟ್ಟ ಚಾಳಿ ನಡೆಯುತ್ತಿದೆ. ಈಗ ನಾನು ಕೇಳಿರುವ ಪ್ರಶ್ನೆಗೆ ಮೂರು ಹೆಸರುಗಳನ್ನು ಕೊಟ್ಟಿದ್ದೀರಿ. ಶ್ರೀ ಜಿ.ವಿ.ಕೆ. ರಾವ್, ಐ.ಎಸ್. ಕೇದಾರ್, ಮತ್ತು ಎಂ. ಎನ್. ನಾಗರಾಜ್ ಎಂದು ಇವರಿಗೆ ಬೆಂಗಳೂರಿನಲ್ಲಿ ಮನೆ ಇಲ್ಲವೇ ಎಂಬುದನ್ನು ತಾವು ದಯವಿಟ್ಟು ತನಿಖೆ ಮಾಡಬೇಕು.

ಶ್ರೀ ಕೆ ಹೆಚ್. ಪಾಟೀಲ್.—ತಾವು ನಮ್ಮ ಗಮನಕ್ಕೆ ತಂದಿದ್ದೀರಿ, ಇವೊತ್ತೇ ತನಿಖೆ ಮಾಡುತ್ತೇನೆ. ಮನೆ ಇದ್ದರೆ ಮನೆ ಕೊಡಬೇಕು ಎಂದು ರೆಂಟ್ ಕಂಟ್ರೋಲ್‌ನಲ್ಲಿ ನಿಯಮ ಇಲ್ಲ. ಮನೆ ಇದ್ದವರಿಗೆ ಕೊಡಬಾರದು. ಅವರು ಮನೆ ಇಲ್ಲವೆಂದು ಹೇಳಿದರೆ ರೆಂಟ್ ಕಂಟ್ರೋಲ್‌ನವರು ಅಲಾಟ್ ಮಾಡುತ್ತಾರೆ. ಆದರೂ ತಾವು ಇವರಿಗೆ ಮನೆಗಳಿವೆ ಎಂದು ನನ್ನ ನಜರಿಗೆ ತಂದಿದ್ದೀರಿ. ಈ ಬಗ್ಗೆ ಎಂಕ್ವೈರಿ ಮಾಡುತ್ತೇನೆ.

ಸರ್ವೆ ಇಲಾಖೆಯಲ್ಲಿ ಗ್ರಾಮದ ನಕಾಶೆಗಳು ಸರಿಯಾಗಿ ರೈತರಿಗೆ ಸಿಕ್ಕುತ್ತಿಲ್ಲವೆಂಬುದರ ಬಗ್ಗೆ

೪೯೮ (೧೬೫೦) ಶ್ರೀ ಎಂ. ಪಿ. ವೆಂಕಟೇಶ್ (ಹೆಗ್ಗಡದೇವನ ಕೋಟೆ).—ಮಾನ್ಯ ಕಂದಾಯ ಮತ್ತು ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸರ್ವೆ ಇಲಾಖೆಯಲ್ಲಿ ಗ್ರಾಮದ ನಕಾಶೆಗಳು ಸರಿಯಾಗಿ ರೈತರಿಗೆ ಸಿಕ್ಕುತ್ತಿಲ್ಲವೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಈ ಬಗ್ಗೆ ಪ್ರಿಂಟ್ ಹಾಕಲು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಇ) ರೈತರಿಗೆ ಗ್ರಾಮದ ನಕಾಶೆಗಳು ಸಿಗುವುದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?